ಎಲ್ಲ ತೆಗೆದು, ಅವಳೇ ಸ್ನಾನ ಮಾಡಿಸಿ ಹೊಸ ಜರಿ ಸೀರೆ ಉಡಿಸುತ್ತಾಳೆ. ಒಳ್ಳೆ ಎಣ್ಣೆ ಸ್ನಾನವನ್ನೇ ಮಾಡಿಸುತ್ತಾಳೆ. ಒಳ್ಳೇ ಊಟ ಬಡಿಸ್ತಾಳೆ. ತಲೆಗೆ ಎಣ್ಣೆ ಹಚ್ಚಿ ಬಾಚಿ... 'ಎಂಗೆಲ್ಲಾ ತೇಡಿನೋಂಡಿ ಪಾತ್ ಮೇ...' ಎಂದು ಅಳುತ್ತಾಳೆ. 'ಸದ್ಯ... ವಂದ್ಯೇಡೀ ತಾಯಿ...' ಎಂದು ಆನಂದಿಸುತ್ತಾಳೆ. ಹೀಗೆಲ್ಲ ನೆನೆದು ಉತ್ಸಾಹ ಬಂತು. ಮನೆಯ ದಾರಿ ಹಿಡಿದು ಹೊರಟೆ. ಅದೇ ಹಳ್ಳಿಯ ಮನೆಗಳು. ನನ್ನ ಹಳ್ಳಿಯಲ್ಲಿ ಯಾವುದೂ ಬದಲಾಗಲೇ ಇಲ್ಲ. ಆದರೆ ದಾರಿಯ ತುಂಬಾ ವಿದ್ಯುತ್ ಕಂಬಗಳು. ಬಹುಶಃ ಎಲ್ಲರ ಮನೆಯಲ್ಲೂ ವಿದ್ಯುತ್ ದೀಪಗಳು ಬಂದಿರಬೇಕು. ದೇವಾಲಯ ಎತ್ತರದಲ್ಲಿ ಕಾಣಿಸಿತು. ಗೋಪುರವನ್ನೇ ನೋಡಿದೆ. ನನ್ನಲ್ಲಿ ಯಾವ ಭಾವ! ಉರಿ ಬಿಸಿಲು. ರಾಮಿಯ ಮನೆ ದಾಟಿ ಪಕ್ಕ ತಿರುಗಿ ನೇರ ನಡೆದರೆ ಬಲಗಡೆ ಐದನೆಯ ಮನೆಯೇ 'ನನ್ನ ಮನೆ'. ಬಿರ ಬಿರನೆ ನಡೆದೆ. ನನ್ನ ಬದುಕಿಗೇ ಒಂದು ದಾರಿ ಸಿಕ್ಕಿತು ಎಂಬಂತೆ ನಡೆದೆ. ಮನೆಯ ಮುಂದೆ ನಿಂತೆ. ನಾಲ್ಕು ಕಂಬಗಳ ಜಗುಲಿ. ಅಲ್ಲೆ ಅಲ್ಲವೇ ನಾನು, ಪೊನ್ನಿ, ರಾಮಿ, ಚಂದು ನಾಲ್ಕೂ ಜನ ಕವಡೆ ಆಡುತ್ತಿದ್ದುದ್ದು, ಕತೆಕೇಳುತ್ತಿದ್ದುದು. ಅಪ್ಪ ಸಂಧ್ಯಾವಂದನೆ ಮಾಡುವಾಗ ಒಮ್ಮೆ ಹೊರಗಡೆ ಬಂದು ಇಲ್ಲೇ ನಿಂತು ಸೂರ್ಯನನ್ನು ನೋಡಿ ಒಳಗೆ ಹೋಗುತ್ತಿದ್ದರು. ತುಳಸಿಕಟ್ಟೆ... ಅದರ ಮುಂದೆ ಅಮ್ಮನ ರಂಗೋಲಿ. ಮೊತ್ತ ಮೊದಲ ಬಾರಿಗೆ ನನ್ನ ಬದುಕಿನಲ್ಲಿ ಕೊರಳುಬ್ಬಿ ಬಂತು. 'ಅಮ್ಮಾ...' ಆಗಷ್ಟೆ ಮಾತು ಕಲಿತ ಮಗು ಕರೆಯುವಂತೆ ಕರೆದೆ. 'ಅಮ್ಮಾ...' ದನಿ ಎತ್ತಿ ಕೂಗಿದೆ. 'ಅಮ್ಮಾ...' ಮಧ್ಯಾಹ್ನವಾಗಿತ್ತು. ಬಾಗಿಲು ಹಾಕಿತ್ತು. ಆ ದಪ್ಪ ಬಾಗಿಲು ತೆಗೆಯಿತು. ಅಮ್ಮ ನನ್ನೆದುರು ಎತ್ತರದಲ್ಲಿ ನಿಂತಿದ್ದಳು. 'ಯಾರ್... ಯಾರದ್?... ಓ... ವಂದೇ ತಾಳ್... ಊರ್ ಕ್ಕ್ ಪುದುಸ್ಸಾ...(ಯಾರು... ಯಾರದು? ಓ... ಬಂದೆ ತಾಳು. ಊರಿಗೆ ಹೊಸಬಳಾ?)' ಎನ್ನುತ್ತಾ ಒಳಗೆ ಹೋದಳು. ಬರುವಾಗ ಅವಳ ಕೈಯಲ್ಲಿ ಅಂದಿನ ಅಡುಗೆ ಇತ್ತು. ಎಲೆಯಲ್ಲಿ ತಂದಿದ್ದಳು. ನಾನು ಅವಳನ್ನೇ ನೋಡಿದೆ. ಅಮ್ಮ ನನ್ನನ್ನು ಗುರುತಿಸಿಲ್ಲ. ಬದುಕಿನ ಮೊಟ್ಟ ಮೊದಲ ನಿರಾಸೆ ಈಗ ಆಯಿತು ನನಗೆ. ಅಮ್ಮ 'ಇಂದ ಇಂಗೆಯೇ ಸಾಪ್ ಡ್' ಎಂದು ಜಗುಲಿಯ ಪಕ್ಕ ಕೈ ತೋರಿಸಿದಳು. ಎಲೆಯನ್ನು ಕೈಯಲ್ಲಿ ಎತ್ತಿಕೊಂಡೆ. ಅಮ್ಮನ ಅಡುಗೆ, ಅವಳ ಕೈತುತ್ತನ್ನು ಉಣ್ಣುತ್ತೇನೆ ಎಂದೇ ಭಾವಿಸಿ ಬಂದಿದ್ದೆ. ದುಃಖ ತಡೆದು ಅವಳೆದುರೇ ಕುಳಿತು ಊಟ ಮಾಡಿದೆ. ಅವಳ ಕೈರುಚಿ ಹಿಂದೆ ಇದ್ದಂತೆಯೇ ಈಗಲೂ ಕೂಡ. ಒಂದು ಅಗುಳನ್ನೂ ಬಿಡದಂತೆ ತಿಂದೆ. ಚೊಂಬಿನಿಂದ ಕೈಗೆ ನೀರು ಸುರಿದಳು. ಬೊಗಸೆಯಲ್ಲಿ ಹಿಡಿದು ಕುಡಿದೆ. 'ಇನ್ನೂ ಪಸಿ ತೀರಿಲ್ಯಾ?' ಕೇಳಿದಳು. 'ಅಮ್ಮಾ... ನಾನ್ ಮ್ಮ... ಪಳ್ನಿ...' ಉದ್ವೇಗದಿಂದ ನುಡಿದು ಅಮ್ಮನ ಮುಖ ನೋಡಿದೆ. ನನ್ನ ಸ್ಥಿತಿ ಅಮ್ಮನನ್ನು ಅಪ್ಪಿಕೊಳ್ಳಲು ಕೂಡ ಬಿಡಲಿಲ್ಲ. ಅವಳ ಕಾಲ ಬಳಿ ಕುಸಿದೆ. 'ಎನ್ನ.. ಪಳ್ನಿಯಾ... ಎನ್ನಾ... ಇಂಗೆ ವಾಂಗೋಳೇ...' ಜೋರಾಗಿ ಅಪ್ಪನನ್ನು ಕರೆದಳು. ಅಪ್ಪ ಬಂದರು. ಅಣ್ಣ ಅತ್ತಿಗೆ ಎಲ್ಲರೂ ಬಂದರು. 'ಪಳ್ನಿ... ಸೊಲ್ರಾಳೇ ಇವ್ ಳ್... ಪಾರಂಗೋಳೇ...(ಇವಳು ಪಳ್ನಿ ಅಂತಾಳಲ್ಲ..ನೋಡೀ...)' ಅಮ್ಮ ಹುಚ್ಚಿಯಂತಾದಳು. 'ಎನ್ನ... ಪಳ್ನಿಯಾ... ಪಳ್ನಿಯಾ...' ಎಲ್ಲರೂ ಓಡಿ ಬಂದರು. ಅಪ್ಪನ ಮುಖ ನೋಡಿದೆ. ನನ್ನ ಕಂಗಳನ್ನೇ ನೋಡಿದರು. 'ನೀ ನಿಜಮ್ಮಾ ಪಳ್ನಿದಾನೇ?...' ಅನುಮಾನದಿಂದ ಕೇಳಿದರು. ಆದರೆ ಅಣ್ಣ ಅರಚಾಡತೊಡಗಿದ್ದ. 'ಚುಮ್ಮ ಇರಪ್ಪ ನೀ... ಏಯ್... ಬಾಯಿಮುಚ್ಚಿಕೊಂಡು ಹೊರಗೆ ಹೋಗು. ನನ್ನ ತಂಗಿ ಹೆಸರನ್ನ ಹೇಳಿದೆ ಅಂದರೆ ನಾಲಿಗೆ ಕತ್ತರಿಸಿ ಬಿಡುತ್ತೀನಿ. ಏನಂತ ತಿಳಿದಿದ್ದೀಯ ನನ್ನನ್ನ...' ತಮಿಳಿನಲ್ಲಿ ಬಯ್ಯತೊಡಗಿದ. ಮೌನವಾಗಿ ಅಲ್ಲಿಂದ ಎದ್ದೆ. ಮೌನವಾಗಿ ಬೀದಿಗೆ ಬಂದು